# ನೀಲ್ಗತೆ

ಬೃಂದಾವನಕೆ ಹಾಲನು ಮಾರಲು ಹೋಗುವ ಬಾರೆ ಬೇಗ ಸಖಿ |
ಬೃಂದಾವನದೆ ಹಾಲನು ಕೊಳ್ಳುವರಾರಿಹರೆ ಹೇಳ್ ಇಂದುಮುಖಿ ||
ಗೋವನು ಕಾಯುವ ಗೋವಿಂದನಿಹನೆ ಹಾಲನು ಕೊಳ್ಳುವ ಕೇಳೆ ಸಖಿ |
ಚಿನ್ನವ ಕೊಡನು, ರನ್ನವ ಕೊಡನು, ತನ್ನನೇ ಕೊಡುವನು ಬಾರೆ ಸಖಿ ||

ಚಿಕ್ಕವಳಾಗಿದ್ದಾಗಿನಿಂದ ಕೇಳುತ್ತಲೇ ಬಂದಿದ್ದ ಹಾಡು ಇದು. ಮನಸೂರೆಗೊಳ್ಳುವ ಪದಗಳು ಮತ್ತು ಗಾಯನ. ಅದನ್ನೇ ಗುನುಗುತ್ತ ಈ ಅರವತ್ತರ ಹೊಸ್ತಿಲಲ್ಲೂ ನವಚೇತನದಿಂದ ಮನೆಯನ್ನೆಲ್ಲ ಅಣಿಗೊಳಿಸತೊಡಗಿದಳು ವಾಸಂತಿ. ಹೊಸದಾಗಿ ಕಟ್ಟಿದ ಮನೆ. ಬಂದು ಒಂದು ತಿಂಗಳಾಗಿತ್ತು. ತಾನು ಕೆಲಸ ಮಾಡುವ ಅಡುಗೆಯ ಗುಂಪಿನವರನ್ನು ಮಾತ್ರ ಕರೆದು ಗೃಹ ಪ್ರವೇಶ ಶಾಸ್ತ್ರ ಮಾಡಿಕೊಂಡಿದ್ದಳು. ಮನಸ್ಸು ತುಂಬು ಸಂತೋಷದಿಂದ ತುಳುಕಾಡುತ್ತಿತ್ತು. ಹೌದು... ಗೋವಿಂದ ಒಬ್ಬನೇ ನನ್ನ ಮನದ ಹಾಲಿಗೆ ಸರಿಯಾದ ನ್ಯಾಯ ಕೊಟ್ಟವನು. ಅವನನ್ನು ಕಂಡರೆ ತನಗೆಷ್ಟು ಪ್ರೀತಿ... ಮೊದಲೇ ಸಜ್ಜು ಮಾಡಿದ್ದ ದೇವರ ಮನೆ ಕಡೆ ನೋಡಿದಳು. ದ್ವಾರಕೆಯ ಕೃಷ್ಣನ ಫೋಟೊ ದೊಡ್ಡದಾಗಿ ರಾರಾಜಿಸುತ್ತಿತ್ತು. ದ್ವಾರಕೆಯಲ್ಲಿ ಕೃಷ್ಣನ ವಿಗ್ರಹ ವಿಶೇಷ. ಆ ಕಪ್ಪುಬಣ್ಣ, ಅವನ ತಲೆಯ ರುಮಾಲು... ಇದೊಂದು ತರಹ ಬೇರೆಯದೇ ರೀತಿ. ಕೃಷ್ಣನಿಗೇ ಹೇಳಿದಳು, 'ಹೌದು ಕೃಷ್ಣ, ನೀನು ನನ್ನ ಬಳಿ ಬಂದ ಮೇಲೆ ನನಗೆ ತುಂಬಾ ಒಳ್ಳೆಯದಾಗಿದೆ. ನೀನಿದ್ದೀಯ ಅಂತ ಹಂತ ಹಂತದಲ್ಲೂ ನಿರೂಪಿಸುತ್ತೀಯ... ಮಗಳಿಗೆ ಓದಿಸಿದೆ. ಮದುವೆ ಮಾಡಿಸಿದೆ. ಈಗ ಮನೆ ಕಟ್ಟಿಸಿಕೊಟ್ಟಿದ್ದೀಯ. ಅವಳೂ ಒಬ್ಬ ಅಡುಗೆಯವಳ ಮಗಳಂತೆ ಬೆಳೆದಳಾ! ಊಹೂಂ... ಎಂಜಿನಿಯರಿಂಗ್ ಮಾಡಿದಳು. ವಿದೇಶದಲ್ಲಿರುವ ಡಾಕ್ಟರ್‌ನನ್ನು ಮದುವೆ ಆದಳು. ಅವಳಿಗೂ ವರುಷದಲ್ಲಿ ಒಂದು ಗಂಡು ಮಗು ಕೊಟ್ಟೆ...' ನಿಡುಸುಯ್ದಳು... 'ಒಡಹುಟ್ಟಿದವರು, ಹೆತ್ತವರು ಅರ್ಥಮಾಡಿಕೊಳ್ಳದ, ನೀಡದ ಎಲ್ಲವನ್ನೂ ನೀನು ಅರ್ಥ ಮಾಡಿಕೊಂಡೆ. ನೀಡಿದೆ. ನನಗೆ ನೀನು ಬರಿಯ ಫೋಟೊ ಅಲ್ಲ... ನನ್ನ ಭಾಗದ ಗೆಳೆಯ, ಉಸಿರು.' ಕಣ್ಣ ಅಂಚಿನಲ್ಲಿ ನೀರು. ಅಷ್ಟರಲ್ಲಿ ಇವಳ ಮೊಬೈಲ್ ಸದ್ದು ಮಾಡಿತು... 'ಅಮ್ಮಾ, ಈಗ ಬಂದೆ ನ್ಯೂಯಾರ್ಕ್‌ನಿಂದ. ಬೆಂಗಳೂರಿಂದ ಹೊರಟಿದ್ದೀನಿ, ಸಂಜೆ ಬರ್ತೀನಿ. ಪುಟ್ಟಂಗೆ ನಿನ್ನ ಶಾವಿಗೆ ಬೇಕಂತೆ, ರೆಡಿ ಮಾಡಿರು. ಬೈ' ಮಗಳು ಪ್ರಭಾಳ ಫೋನು.

ಮನಸ್ಸಿಗೆ ಮತ್ತಷ್ಟು ಮುದ ಬಂದಿತು. ಅವಳು ಹೊಸ ಮನೆ ನೋಡಿಲ್ಲ. ಸದ್ಯ ಪುಟ್ಟನೂ ಬರ್ತಿದ್ದಾನೆ. ಶಾವಿಗೆ ಅವನಿಗೆ ಇಷ್ಟ. ತಾನು ಮನೆಯಲ್ಲೇ ಮಾಡುತ್ತೇನಲ್ಲ. ಹೌದು, ನನ್ನ ಕೈ ಅಡುಗೆ ನನ್ನ ಮಗಳು, ಅಳಿಯ, ಪುಟ್ಟ... ಎಲ್ಲರಿಗೂ ಇಷ್ಟ. ಮನಸ್ಸು ಒಳದನಿಯಲ್ಲಿ ಕೇಳಿತು, 'ನಿನ್ನ ಗಂಡನಿಗೆ?' ಮುಖ ಸ್ವಲ್ಪ ಬಾಡಿತು. ತಕ್ಷಣವೇ ಚೇತರಿಸಿಕೊಂಡಳು. ತಂಗಿ ಸುಮತಿಗೆ ಹೇಳ್ತೀನಿ. ಅವಳಿಗೂ ಪ್ರಭಳನ್ನ ಕಂಡರೆ ಇಷ್ಟವೇ... ಪುಟ್ಟ ಕಿರಣ ಅಂತೂ ಎಲ್ಲರ ಪ್ರೀತಿಯ ಕೂಸು. ಮಾಡುತ್ತಿದ್ದ ಕೆಲಸ ನಿಲ್ಲಿಸಿ ಸುಮತಿಗೆ ಫೋನಾಯಿಸಿದಳು.

'ಹೇಳು ಅಕ್ಕ, ತಿಂಡಿ ಆಯ್ತಾ? ಮನೆ ಎಲ್ಲ ಸರಿ ಮಾಡಿಕೊಂಡೆಯಾ? ನಾನು ಬರ್ತೀನಿ ಹೆಲ್ಪ್ ಮಾಡಕ್ಕೆ ಅಂದ್ರೆ ನೀನು ಕೇಳೋದೇ ಇಲ್ಲ...'

'ಇಲ್ಲಿ ಕೇಳು, ಸ್ವಲ್ಪ ಸ್ವಲ್ಪ ಎಲ್ಲ ಸರಿ ಮಾಡ್ತ ಇದ್ದೀನಿ. ಈಗ ಪ್ರಭ ಹೊರಟಿದ್ದಾಳೆ ಬೆಂಗಳೂರಿಂದ. ಬೆಳಿಗ್ಗೆ ಬಂದು ಇಳಿದಳಂತೆ. ಇನ್ನೇನು ಐದಾರು ಗಂಟೇಲಿ ಬರ್ತಾಳೆ. ನಿನಗೆ ಹೇಳೋಣ ಅಂತ ಫೋನ್ ಮಾಡಿದೆ.'

'ಹೌದಾ, ಎಷ್ಟು ಖುಷಿ ಆಗ್ತಿದೆ ಗೊತ್ತಾ ಅಕ್ಕ. ತುಂಬಾ ಒಳ್ಳೆಯದು. ಭಾವಂಗೂ ಹೇಳ್ತೀನಿ.